# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 1304 |
| ಮಾನ್ಯ ಸದಸ್ಯರ ಹೆಸರು: | ಶ್ರೀ ಟಿ.ಎನ್.ಜವರಾಯಿ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ: | 16.03.2026 |
| ಉತ್ತರಿಸುವ ಸಚಿವರು: | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

***

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ 108 ಆಂಬ್ಯುಲೆನ್ಸ್‌ಗಳ ಸಂಖ್ಯೆ ಎಷ್ಟು; ಈ ಅಂಬ್ಯುಲೆನ್ಸ್‌ಗಳ ಸೇವೆಯನ್ನು ಜಿಲ್ಲಾವಾರು ಹಂಚಿಕೆ ಮಾಡಲಾಗಿದೆಯೇ (ಹಾಗಿದ್ದಲ್ಲಿ, ಜಿಲ್ಲಾವಾರು ಮಾಹಿತಿ ನೀಡುವುದು) | 108-ಆರೋಗ್ಯ ಕವಚ ಸೇವೆಯಡಿಯಲ್ಲಿ ಪ್ರಸ್ತುತ ರಾಜ್ಯದಲ್ಲಿ ಒಟ್ಟು 715 ಆಂಬ್ಯುಲೆನ್ಸ್‌ಗಳು ಕಾರ್ಯ ನಿರ್ವಹಿಸುತ್ತಿವೆ. ಈ ಆಂಬ್ಯುಲೆನ್ಸ್‌ಗಳನ್ನು ಜಿಲ್ಲಾವಾರು ಹಂಚಿಕೆಯನ್ನು ಮಾಡಲಾಗಿದೆ.<br>ಜಿಲ್ಲಾವಾರು ಆಂಬ್ಯುಲೆನ್ಸ್‌ಗಳ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ. |
| ಆ) | ಗ್ರಾಮೀಣ ಪ್ರದೇಶದಲ್ಲಿ ಆಂಬ್ಯುಲೆನ್ಸ್‌ಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; (ವಿವರ ನೀಡುವುದು) | ಕೇಂದ್ರ ಸರ್ಕಾರದ ರಾಷ್ಟ್ರೀಯ ಆರೋಗ್ಯ ಅಭಿಯಾನ ಕಾರ್ಯಕ್ರಮದ ಮಾರ್ಗಸೂಚಿಯನ್ವಯ ಪ್ರತಿ 5 ಲಕ್ಷ ಜನ ಸಂಖ್ಯೆಗೆ ಒಂದು ಎ.ಎಲ್.ಎಸ್ ಹಾಗೂ ಪ್ರತಿ 1ಲಕ್ಷ ಜನ ಸಂಖ್ಯೆಗೆ ಒಂದು ಬಿ.ಎಲ್.ಎಸ್ ಆಂಬ್ಯುಲೆನ್ಸ್‌ಗಳನ್ನು ನಿಯೋಜನೆ ಮಾಡಬೇಕಾಗಿರುತ್ತದೆ. ಇದರನ್ವಯ ರಾಜ್ಯದ ಜನ ಸಂಖ್ಯೆಗೆ ಅನುಗುಣವಾಗಿ ಸುಮಾರು 820 ಆಂಬ್ಯುಲೆನ್ಸ್‌ಗಳ ಅವಶ್ಯಕತೆ ಇರುತ್ತದೆ.<br>ಆದರೆ ಪ್ರಸ್ತುತ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಯಡಿಯಲ್ಲಿ 108-ಆರೋಗ್ಯ ಕವಚ ಕಾರ್ಯಕ್ರಮದಡಿಯಲ್ಲಿ 715 ಆಂಬ್ಯುಲೆನ್ಸ್‌ಗಳು ಹಾಗೂ ರಾಜ್ಯ ವಲಯದ 1000 ಆಂಬ್ಯುಲೆನ್ಸ್‌ಗಳಿದ್ದು, ಒಟ್ಟಾರೆಯಾಗಿ 1715 ಆಂಬ್ಯುಲೆನ್ಸ್‌ಗಳು ಸೇವೆ ಒದಗಿಸುತ್ತಿದ್ದು, ಮಾನದಂಡಗಳಿಗಿಂತ 895 ಆಂಬ್ಯುಲೆನ್ಸ್‌ಗಳು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಾಚರಣೆಯಲ್ಲಿದ್ದು, ರಾಜ್ಯದಲ್ಲಿ ಆಂಬ್ಯುಲೆನ್ಸ್ ಕೊರತೆ ಇರುವುದಿಲ್ಲ.<br>ಸದರಿ ಆಂಬ್ಯುಲೆನ್ಸ್‌ಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳು (CHC), ತಾಲ್ಲೂಕು ಆಸ್ಪತ್ರೆಗಳು, ಜಿಲ್ಲಾ ಆಸ್ಪತ್ರೆಗಳು ಹಾಗೂ ದುರ್ಗಮ ಪ್ರದೇಶದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ (PHC) ನಿಲುಗಡೆ ಮಾಡಲಾಗಿದ್ದು, ತುರ್ತು ಆರೋಗ್ಯ ಸೇವೆಗಳನ್ನು ಒದಗಿಸಲಾಗುತ್ತಿದೆ. |
| ಇ) | ರಾಜ್ಯ ಗ್ರಾಮೀಣ ಭಾಗದಲ್ಲಿ ತುರ್ತು ಸಂದರ್ಭದಲ್ಲಿ ಆಂಬ್ಯುಲೆನ್ಸ್ ಸಿಗದೆ ಗ್ರಾಮೀಣ ಪ್ರದೇಶದ ಸಾವಿರಾರು ಜನ, ಪ್ರತಿ ವರ್ಷ ಪ್ರಾಣ ಕಳೆದುಕೊಳ್ಳುತ್ತಿದ್ದು, ಮೂರು ಅಥವಾ ನಾಲ್ಕು ಗ್ರಾಮ ಪಂಚಾಯತಿಗಳಿಗೊಂದು ಆಂಬ್ಯುಲೆನ್ಸ್‌ಗಳ ಸೇವೆಯನ್ನು ಒದಗಿಸಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ; ಈ ಬಗ್ಗೆ ಮಾಹಿತಿ ನೀಡುವುದು? | |

| | | |
|---|---|---|
| | | 2025-26ನೇ ಸಾಲಿನ ಆಯವ್ಯಯ ಘೋಷಣೆಯನ್ವಯ ಪ್ರಸ್ತುತ 108-ಆರೋಗ್ಯ ಕವಚ್ ಯೋಜನೆಯಡಿಯಲ್ಲಿ ಕಮಾಂಡ್ ಅಂಡ್ ಕಂಟ್ರೋಲ್ ಸೆಂಟರ್‌ನ್ನು ಸರ್ಕಾರವು ವಹಿಸಿಕೊಂಡು ಇದರಡಿಯಲ್ಲಿ ರಾಜ್ಯ ವಲಯದ ಹಾಗೂ 108-ಆರೋಗ್ಯ ಕವಚ್ ಅಡಿಯಲ್ಲಿ ಬರುವಂತಹ ಆಂಬ್ಯುಲೆನ್ಸ್‌ಗಳನ್ನು ವಿಲೀನಗೊಳಿಸಿ ಕೇಂದ್ರಿಕೃತ ಕಮಾಂಡ್ ಅಂಡ್ ಕಂಟ್ರೋಲ್ ಸೆಂಟರ್ ಮೂಲಕ ನಿರ್ವಹಿಸಲು ಕ್ರಮ ವಹಿಸಲಾಗುತ್ತಿದೆ.<br><br>108 ಆರೋಗ್ಯ ಕವಚ ಯೋಜನೆಯಡಿಯಲ್ಲಿ ದುರಸ್ಥಿಗೆ ಒಳಗಾದ ಆಂಬ್ಯುಲೆನ್ಸ್‌ಗಳನ್ನು ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದಡಿಯಲ್ಲಿ ಖರೀದಿಸಲಾದ ಆಂಬ್ಯುಲೆನ್ಸ್‌ಗಳಿಂದ ಬದಲಾಯಿಸಲು ಕ್ರಮ ವಹಿಸಲಾಗಿದ್ದು, ಅಗತ್ಯ ಆಂಬ್ಯುಲೆನ್ಸ್‌ಗಳ ನಿರ್ವಹಣೆಯನ್ನು ನಿರ್ವಹಿಸಲು ಕ್ರಮ ಕೈಗೊಂಡಿದೆ. |

ಆಕುಕ 27 ಎಸ್‌ಬಿವಿ 2026

(ದಿನೇಶ್ ಗುಂಡೂರಾವ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

| ಅನುಬಂಧ-01 | | | |
|---|---|---|---|
| SL No | District | No. Of 108-Arogya Kavacha Ambulances | No. of State Ambulance |
| 1 | Bagalkote | 23 | 51 |
| 2 | Ballari | 14 | 28 |
| 3 | Belagavi | 56 | 65 |
| 4 | Bengaluru | 71 | 11 |
| 5 | Bengaluru Rural | 16 | 14 |
| 6 | Bidar | 19 | 52 |
| 7 | Bijapur | 29 | 37 |
| 8 | Chamarajanagar | 13 | 19 |
| 9 | Chikkaballapura | 16 | 38 |
| 10 | Chikkamagaluru | 14 | 24 |
| 11 | Chitradurga | 24 | 42 |
| 12 | Dakshina Kannada | 27 | 16 |
| 13 | Davanagere | 19 | 24 |
| 14 | Dharwad | 23 | 26 |
| 15 | Gadag | 13 | 26 |
| 16 | Gulbarga | 27 | 44 |
| 17 | Hassan | 26 | 29 |
| 18 | Haveri | 22 | 41 |
| 19 | Kodagu | 8 | 26 |
| 20 | Kolar | 20 | 22 |
| 21 | Koppal | 17 | 29 |
| 22 | Mandya | 21 | 24 |
| 23 | Mysuru | 33 | 45 |
| 24 | Raichur | 23 | 48 |
| 25 | Ramanagara | 12 | 19 |
| 26 | Shivamogga | 25 | 37 |
| 27 | Tumakuru | 35 | 36 |
| 28 | Udupi | 18 | 16 |
| 29 | Uttara Kannada | 20 | 43 |
| 30 | Vijayanagara | 19 | 45 |
| 31 | Yadgir | 12 | 23 |
| Total | | 715 | 1000 |
| **Grand Total** | | **1715** | |



e No. HFW/27/SBV/2026-HEALTH 2-HEALTH AND FAMILY WELFARE SEC (Computer No. 2093787)
nerated from eOffice by NAGARAJ R, HFW-JS2(NAG), JOINT SECRETARY 2, HEALTH AND FAMILY WELFARE SEC on 09/03/2026 12:48 PM